# ಪ್ರವಾಸ-ಪ್ರಯಾಸ? (ಒಂದು ಅನುಭವ)

-ಗೋಪಾಲಕೃಷ್ಣ ಕೋಲ್ಪೆ

ವೃತ್ತಿಯಿಂದ ನಿವೃತ್ತಿ ಹೊಂದಿದ ಹಿರಿಯ ನಾಗರಿಕರಿಗೆ ಕ್ಷೇತ್ರಯಾತ್ರೆ ಹಾಗೂ ಪ್ರೇಕ್ಷಣೀಯ ಸ್ಥಳಗಳ ಸಂದರ್ಶನ ಆಪ್ಯಾಯಮಾನ. ಮನೆಯ ಜವಾಬ್ದಾರಿಯಿಂದ ಸ್ವಲ್ಪ ಸಮಯ ದೂರವಿದ್ದು ಹೊಸ ಚೈತನ್ಯ ಪಡೆಯಲು ಇದಕ್ಕಿಂತ ಒಳ್ಳೆಯ ಮಾರ್ಗ ಬೇರೊಂದಿಲ್ಲವೆಂದು ನನ್ನ ಅನಿಸಿಕೆ. ಸಾಮಾನ್ಯವಾಗಿ ಪ್ರತಿಯೊಂದು ಕುಟುಂಬವೂ ಈ ತರದ ಪ್ರವಾಸಗಳನ್ನು ಕೈಕೊಂಡು ಅನುಭವ, ಜ್ಞಾನ, ಚೈತನ್ಯ ಹಾಗೂ ಮನಃ ಸಂತೋಷ ಪಡೆಯುವುದು ಇತ್ತೀಚಿನ ದಿನಗಳಲ್ಲಿ ಜಾಸ್ತಿಯಾಗುತ್ತಿದೆ. ಈ ರೀತಿಯ ಪರಿವರ್ತನೆ ಕುಟುಂಬದ ಹಾಗೂ ಸಮಾಜದ ಏಳಿಗೆಗೆ ಅಗತ್ಯವೆಂದು ನನ್ನ ಅಭಿಮತ.

ಕಳೆದ ವರ್ಷ (2006) ರಾಜಸ್ಥಾನದ ಆಬುಬೆಟ್ಟಕ್ಕೆ ಮಂಗಳೂರಿನ ಪ್ರಜಾಪಿತ ಬ್ರಹ್ಮಕುಮಾರಿ ಸಂಸ್ಥೆಯವರ ಸಹಯೋಗದೊಂದಿಗೆ ಹೋಗಿ, ಉದಯಪುರ, ಜಯಪುರ ಇತ್ಯಾದಿ ಸ್ಥಳಗಳಿಗೆ ಸಂದರ್ಶನವಿತ್ತಿದ್ದೆವು. ಅದರ ಹಿಂದಿನ ವರ್ಷ ಶಬರಿಮಲೆ ಹಾಗೂ ದಕ್ಷಿಣ ಭಾರತದ ಮುಖ್ಯ ಕ್ಷೇತ್ರಗಳಿಗೆ ಪ್ರಯಾಣ. ಈ ವರ್ಷ ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶದ ಕೆಲವು ಕ್ಷೇತ್ರಗಳಿಗೂ / ಪ್ರೇಕ್ಷಣೀಯ ಸ್ಥಳಗಳಿಗೂ ಪ್ರವಾಸ ಹೋಗುವುದೆಂದು ನಿಶ್ಚೈಸಿ ನಾವು 8 ಜನ ಸಂಬಂಧಿಗಳು (ಎಲ್ಲರೂ ಹಿರಿಯ ನಾಗರಿಕರು) ಕಳೆದ ನವಂಬರ್ 26 ರಂದು ಟೆಂಪೋ ಟ್ರಾಕ್ಸ್-ತೂಫಾನ್‌ನಲ್ಲಿ ಕಡಬದಿಂದ ಬೆಳಿಗ್ಗೆ 6-30 ಗಂಟೆಗೆ ಹೊರಟು ಪೊಳಲಿ, ಕಟೀಲು ಮತ್ತು ಉಡುಪಿ ದೇವಳಗಳನ್ನು ಸಂದರ್ಶಿಸಿ ಮುಂದುವರಿದು ರಾತ್ರಿಗೆ ಹುಬ್ಬಳ್ಳಿಯ ಹೋಟೆಲೊಂದರಲ್ಲಿ ವಿರಮಿಸಿದೆವು. ಮೂರನೇ ದಿನ ಬೆಳಿಗ್ಗೆ (ತಾ.27ಕ್ಕೆ) ಬೆಳಗಾಂಗೆ ಹೋಗಿ ಸಮೀಪದ ಹಿಡಕಲ್ ಅಣೆಕಟ್ಟು ಪ್ರದೇಶಕ್ಕೆ ಭೇಟಿಕೊಟ್ಟು ಮುಂದಕ್ಕೆ ಕೊಲ್ಹಾಪುರದ ಪ್ರಸಿದ್ಧ ಮಹಾಲಕ್ಷ್ಮೀ ದೇವಸ್ಥಾನವನ್ನು ಸಂದರ್ಶಿಸಿದೆವು. (ಇಲ್ಲಿಗೆ ಕಡಬದಿಂದ ಸುಮಾರು 700 ಕಿ.ಮೀ. ದೂರ) ಬಹಳ ಅದ್ಭುತವಾದ ದೇವಸ್ಥಾನ ಇದಾಗಿದ್ದು ದೇವಿ ಮಹಾಲಕ್ಷ್ಮೀಗೆ ಸೇವಾದಿಗಳನ್ನು ಅರ್ಪಿಸಿದೆವು. ಕೊಲ್ಹಾಪುರದಲ್ಲಿ ನಮ್ಮ ವಾಹನದ ನಂಬರನ್ನು ನೋಡಿ (ಕರ್ನಾಟಕದ್ದೆಂದು ತಿಳಿದು) ಅಲ್ಲಿಯ ಪೋಲೀಸರು ಸಾಕಷ್ಟು ಸಲ ನಿಲ್ಲಿಸಿ ಕಿರುಕುಳ ಕೊಟ್ಟದ್ದು ಮರೆಯುವಂತಿಲ್ಲ. ಸಂಜೆ 4-30 ಗೆ ಆ ಊರನ್ನು ಬಿಟ್ಟು ಪೂನಾ ನಗರವನ್ನು ತಲಪಿ ಹೋಟೆಲೊಂದರಲ್ಲಿ ದುಬಾರಿ ಬಾಡಿಗೆ ತೆತ್ತು ವಾಸ್ತವ್ಯ ಹೂಡಿದೆವು.

ತಾ.28ರಂದು ಬೆಳಗ್ಗೆ ಪೂನಾ ಬಿಟ್ಟು ಮಧ್ಯಾಹ್ನಕ್ಕೆ ಸಂಗಮನೂರಿಗಾಗಿ ನಾಸಿಕ ನಗರ ತಲಪಿದೆವು. ಅಲ್ಲಿ ಪಂಚವಟಿ ಪ್ರದೇಶ, ಶ್ರೀ ರಾಮಚಂದ್ರ ಸೀತಾ ಲಕ್ಷ್ಮಣ ಸಹಿತ ಆಗ ಅವರಿದ್ದ ಪರ್ಣಕುಟೀರದ ಜಾಗದಲ್ಲಿರುವ ಈಗಿನ ಮಂದಿರ, ಶೂರ್ಪನಖೆಯನ್ನು ಲಕ್ಷ್ಮಣ ದಂಡಿಸಿದ ಜಾಗ ಇತ್ಯಾದಿ ವೀಕ್ಷಿಸಿದೆವು. ಗೊಂಡಾರಣ್ಯವಾಗಿದ್ದ ಪಂಚವಟಿ ಪ್ರದೇಶ ಈಗ ಕಾಂಕ್ರೀಟು ಮನೆಗಳಿಂದ ತುಂಬಿ ನೈರ್ಮಲ್ಯವಿಲ್ಲದ ಸಣ್ಣಪುಟ್ಟ ಗಲ್ಲಿಗಳಲ್ಲಿ ವಾಸಿಸುವ ಜನರ ಪರಿಸ್ಥಿತಿ ನೋಡಿ ಮನಸ್ಸು ಖೇದಗೊಂಡಿತು. ಪ್ರವಾಸೋದ್ಯಮ ಇಲಾಖೆಗಳ ವೈಫಲ್ಯ ಇಲ್ಲಿಯೂ ಕಂಡುಬರುತ್ತದೆ.

ನಾಸಿಕದಿಂದ ಅರ್ಧಗಂಟೆ ದಾರಿ ಸಾಗಿದರೆ, ಜ್ಯೋತಿರ್ಲಿಂಗಗಳಲ್ಲಿ ಒಂದಾದ ತ್ರಿಯಂಬಕೇಶ್ವರ ಕ್ಷೇತ್ರವಿದೆ. ಹೋಗುತ್ತಾ ದಾರಿ ಮಧ್ಯೆ, ಸಮವಸ್ತ್ರವಿಲ್ಲದ ವ್ಯಕ್ತಿಯೊಬ್ಬ ಕೈಯಲ್ಲಿದ್ದ ಮೊಬೈಲ್‌ನಲ್ಲಿ ಮಾತನಾಡುತ್ತಾ, ಹತ್ತಿರ ಒಂದು ಮೋಟಾರ್ ಬೈಕ್ ಹಾಗೂ ಒಂದೆರಡು ವಾಹನಗಳನ್ನು ನಿಲ್ಲಿಸಿ ನಮ್ಮನ್ನು ತಡೆದ. ಆ ವಾಹನಗಳಿಂದಲೂ ಸ್ವಲ್ಪ ಹಣ ಕಿತ್ತು ನಮ್ಮ ಕಾರಿನ ಎಲ್ಲಾ ಕಾಗದ ಪತ್ರಗಳು ಸರಿ ಇದ್ದರೂ, ಡ್ರೈವರ್‌ನ ಸಮವಸ್ತ್ರದ ಬಗ್ಗೆ ತಕರಾರು ತೆಗೆದು (ಬಿಳಿ ವಸ್ತ್ರವಿದ್ದರೂ ಖಾಕಿ ಬೇಕೆಂದು ಹೆದರಿಸಿ) ರೂ.100 ಕಿತ್ತೇಬಿಟ್ಟ, ಕಡೆಗೆ ಬೇರೆ ಡ್ರೈವರ್‌ಗಳ ಹತ್ತಿರ ವಿಚಾರಿಸಿದಾಗ ಆತ ಒಬ್ಬ ಬೋಗಸ್ ಅಧಿಕಾರಿಯೆಂದು ತಿಳಿಯಿತು. ನಾವು ಆತನ ಗುರುತು ಪತ್ರ ವಿಚಾರಿಸದೆ ಬೇಸ್ತುಬಿದ್ದೆವು. ತ್ರಿಯಂಬಕೇಶ್ವರನಿಗೆ ಸೇವೆ ಸಲ್ಲಿಸಿ, ಅಲ್ಲಿಂದ ಶಿರ್ಡಿ ಕ್ಷೇತ್ರಕ್ಕೆ ರಾತ್ರಿ 9-30ಗೆ ತಲಪಿದೆವು. ಮಾರನೇ ದಿನ ಗುರುವಾರವಾದುದರಿಂದ ಅಲ್ಲಿ ಬಹಳ ಜನಸ್ತೋಮವಿತ್ತು. ಹೋಟೆಲ್ ಒಂದರಲ್ಲಿ ವಾಸ್ತವ್ಯವಿದ್ದು, ಬೆಳಿಗ್ಗೆ ಬೇಗನೇ ಸರದಿಯಲ್ಲಿ ನಿಂತು ಗುರು ಸಾಯಿಬಾಬರ ದರ್ಶನಗೈದೆವು. ಶಿರ್ಡಿಕ್ಷೇತ್ರ ಸುಂದರ / ಸ್ವಚ್ಛವಾಗಿದೆ. ಮನಸ್ಸಿಗೆ ಬಹಳ ಉಲ್ಲಾಸವಾಯಿತು.

ತಾ.29 ರಂದು ಬೆಳಗ್ಗೆ ಶಿರ್ಡಿ ಬಿಟ್ಟು ಸುಮಾರು 75 ಕಿ.ಮೀ ದೂರದ ಶನಿಶಿಂಗಣಾಪುರಕ್ಕೆ ಪ್ರಯಾಣ ಮುಂದುವರಿಸಿದೆವು. ಬಹಳ ಸುಂದರವಾದ ಮಂದಿರವನ್ನು ಶನಿದೇವರಿಗೆ ಕಟ್ಟಿಸಿದ್ದಾರೆ. ನಾವು ವಾಹನ ನಿಲ್ಲಿಸಿದ ಸ್ಥಳದಲ್ಲಿದ್ದ ಅಂಗಡಿಯವರು ನಮ್ಮನ್ನು ಹಿಂಬಾಲಿಸಿ ನಮಗೆ ನಾಲ್ಕು ಗಂಡಸರಿಗೂ ರೂ. 400/-ರಂತೆ ಹರಕೆ ವಸ್ತುಗಳನ್ನು ಕೊಡಿಸಿ, ಕಾವಿಬಟ್ಟೆಕೊಟ್ಟು ಸ್ನಾನ ಮಾಡುವಂತೆ ಹೇಳಿ ಒದ್ದೆ ಬಟ್ಟೆಯಲ್ಲೇ ಶನಿಗುಡಿಗೆ ದಾರಿ ತೋರಿಸಿದರು. ಹೆಂಗಸರಿಗೆ ಈ ಸೇವೆ ನಿಷಿದ್ಧ. ಗುಡಿಯ ಒಳಗೆ ಬರಬಹುದು. ಶನಿ ಮಹಾರಾಜನಿಗೆ ಎಳ್ಳೆಣ್ಣೆ ಅಭಿಷೇಕ ಮಾಡಿ, ಪೂಜೆ ಸಲ್ಲಿಸಿ ಹಿಂತಿರುಗಿದೆವು. ಪೂಜಾ ಸಾಮಾಗ್ರಿ ಕೊಟ್ಟ ಅಂಗಡಿಯವನೊಡನೆ ವಿಚಾರಿಸಿದಾಗ ಕೆಲವು ವಿಷಯಗಳು ತಿಳಿದು ಬಂತು. ಹೆಚ್ಚಿನ ಅಂಗಡಿಗಳು ರಾಜಕೀಯ ಪುಢಾರಿಗಳ ಅಧೀನದಲ್ಲಿದೆಯೆಂದೂ, ಬಾಡಿಗೆ ವಿಪರೀತ ವಸೂಲು ಮಾಡುತ್ತಾರೆಂದೂ ತಿಳಿಯಿತು. ಶನಿದೇವನಿಗೆ ಅಭಿಷೇಕವಾದ ಎಣ್ಣೆ ಪೀಠದಡಿ ಇಳಿದು ಅಲ್ಲಿ ಟ್ಯಾಂಕೊಂದರಲ್ಲಿ ಸಂಗ್ರಹವಾಗಿ ಅದನ್ನು ರಾತ್ರಿಯಲ್ಲಿ ಪಂಪ ಮೂಲಕ ಎತ್ತಿ ರಾಜಕಾರಣಿಗಳ ಸಾಬೂನು ಕಾರ್ಖಾನೆಗಳಿಗೆ ಸರಬರಾಜು ಆಗುತ್ತಿದೆಯಂತೆ. ಇನ್ನೊಂದು ಆಶ್ಚರ್ಯದ ವಿಷಯವೆಂದರೆ ಆ ಪ್ರದೇಶದಲ್ಲಿ ಯಾವುದೇ ಮನೆ-ಕಚೇರಿಗಳಿಗೆ-ಅಂಗಡಿಗಳಿಗೆ ಬಾಗಿಲುಗಳಿಲ್ಲ ಬೀಗಗಳಿಲ್ಲ. ಅಲ್ಲಿಯ ಬ್ಯಾಂಕೊಂದು ತನ್ನ ತಿಜೋರಿಯನ್ನು ನೆಲಮಾಳಿಗೆಯಲ್ಲಿಟ್ಟು ಭದ್ರಪಡಿಸಿದ್ದಾರಂತೆ.

ಶನಿಶಿಂಗಣಾಪುರದಿಂದ ಅಹಮದ್ ನಗರಕ್ಕಾಗಿ ತುಳಜಾಪುರ ಸೇರುವಾಗ ರಾತ್ರಿ 8-30 ಆಗಿತ್ತು. ಸುಮಾರು 270ಕಿ.ಮೀ. ದೂರ ಪ್ರಯಾಣ. ತುಳಜಾಪುರದಲ್ಲಿ ಹೋಟೆಲ್ ನಡೆಸುತ್ತಿರುವ ನಮ್ಮವರೇ ಆದ ಹಿರಿಯಡ್ಕ ಆಳುಗ್ಗೇಲ್ ಮಾಧವರಾಯರು ನಮ್ಮನ್ನು ಕಾದು ಕುಳಿತಿದ್ದರು. ಅವರ ನೇತೃತ್ವದಲ್ಲಿ ಅದೇ ರಾತ್ರಿ ತುಳಜಾಭವಾನಿ ದೇವಸ್ಥಾನವನ್ನು ವೀಕ್ಷಿಸಿ, ಮರಾಠ ವಂಶಜ ಶಿವಾಜಿ ಮಹಾರಾಜನಿಗೆ ಖಡ್ಗವಿತ್ತ ದೇವಿ ಭವಾನಿಯ ಸೇವೆ ಮಾಡಿದೆವು. ರಾಯರ ಮನೆಯಲ್ಲೇ ರಾತ್ರಿ ಉಟೋಪಚಾರ/ವಾಸ್ತವ್ಯ. ಅವರ ಶ್ರೀಮತಿಯವರ ಆದರಾತಿಥ್ಯ ಮರೆಯಲಸಾಧ್ಯ. ತುಳಜಾ ಭವಾನಿಗೆ ವರ್ಷಕ್ಕೊಮ್ಮೆ ಮಹಾಯಾಗ ನಡೆದು, ಯಾಗ ಕುಂಡವನ್ನು ಬ್ರಾಹ್ಮಣ ಪುರೋಹಿತರು ವಿಸರ್ಜಿಸಿದ ನಂತರ ಅಲ್ಲಿಯ ಪದತಿಯಂತೆ ಇತರ ಜಾತಿಯವರು ಪ್ರಾಣಿಬಲಿ (ಆಡು/ಕುರಿ) ಸಮರ್ಪಣೆಯನ್ನು ಆ ಯಾಗ ಕುಂಡಕ್ಕೆ ಮಾಡುತ್ತಾರೆಂದು ತಿಳಿದು ಬಂತು ಈ ಮುಂದುವರಿದ ಯುಗದಲ್ಲೂ ಇದರ ಅಂತ್ಯ ಎಂದು?

ತುಳಜಾಪುರದಿಂದ ಮಾರನೇ ದಿನ (ತಾ.30ಕ್ಕೆ) ನಮ್ಮ ಮುಂದಿನ ಪ್ರಯಾಣ ಸುಮಾರು 100ಕಿ.ಮೀ, ದೂರದ ಪಂಡರಾಪುರಕ್ಕೆ, ಪಾಂಡುರಂಗನ ದಿವ್ಯ ಸನ್ನಿಧಿ ತಲಪಲು ಇಲ್ಲದ ಪಾಡು ಪಡಬೇಕಾಯಿತು. ಜನಜಂಗುಳಿಯಲ್ಲಿ ಕನಿಷ್ಠ 4-5 ತಾಸು ಸರತಿ ನಿಲ್ಲುವ ಸ್ಥಿತಿಯಲ್ಲಿ ನಾವು ಇರಲಿಲ್ಲ. ಕಾರಣ ಆ ರಾತ್ರಿ ನಾವು ಹೈದ್ರಾಬಾದ್‌ಗೆ ಮುಟ್ಟುವ ಗುರಿ ಇತ್ತು. ಅಲ್ಲಿ ನಮಗೆ ಮಾರ್ಗದರ್ಶಿ (ಗೈಡ್) ಒಬ್ಬನ ಪರಿಚಯವಾಗಿ, ಆತನ ಮೂಲಕ ದೇವಳದ ಅರ್ಚಕರೊಬ್ಬರೊಂದಿಗೆ ಮತಾಡಿ ರೂ.2500/- ರ ತುಳಿಸಿ ಅರ್ಚನೆ ಸೇವೆ ಎಂಬ ಹೆಸರಿನಲ್ಲಿ ಹತ್ತಿರದ ದಾರಿಯಲ್ಲಿ ಒಳಹೋಗುವ ವ್ಯವಸ್ಥೆಯಾಯಿತು. ಆದರೂ ಒಂದು ತಾಸು ಕಾದು ಭಗವಾನ್ ಪಾಂಡುರಂಗನ ಹತ್ತಿರ ತಲಪಿದೆವು. ಈ ಹಿಂದೆಯೂ ನಾನೊಮ್ಮೆ ಈ ಸುಂದರ ಮೂರ್ತಿಯನ್ನು ನೋಡಿದ್ದೆ. ಮನತಣಿಯುವಷ್ಟು ನೋಡಲು ಸಮಯ ಎಲ್ಲಿದೆ? ಪಾಂಡುರಂಗನ ಉಸ್ತುವಾರಿ ನೋಡುವ ಘಂಡರು ಸಾಕಷ್ಟು ಪಾದ ಕಾಣಿಕೆ ಹಾಕಿಸಿ ತಮಗೂ ಕಾಣಿಕೆ ನೀಡುವಂತೆ ಪೀಡಿಸಿದರು. ತಪ್ಪಿದಲ್ಲಿ, ಪಾಂಡುರಂಗ ದಯತೋರನೆಂದು ಬೆದರಿಕೆ ಬೇರೆ! ಹೇಗೋ ಅವರಿಂದ ಪಾರಾಗಿ ಹೊರಬಂದೆವು. ನಮ್ಮ ಕೆಲವು ಕ್ಷೇತ್ರಗಳಲ್ಲಿ ನಡೆಯುವ ಈ ರೀತಿಯ ಅವ್ಯವಸ್ಥೆ / ವಸೂಲಿಗೆ ಕೊನೆಯೆಂದು? ಹೀಗಾದರೆ ಪ್ರವಾಸ, ಪ್ರಯಾಸವಾಗುವುದಿಲ್ಲವೇ? ಪ್ರವಾಸೋದ್ಯಮ ಇಲಾಖೆಗಳು, ಧರ್ಮದತ್ತಿ ಇಲಾಖೆಗಳು ಹಾಗೂ ದೇವಳಗಳ ಆಡಳಿತ ಮಂಡಳಿ ಈ ದಿಸೆಯಲ್ಲಿ ಸೂಕ್ತಕ್ರಮ ಕೆಗೊಳ್ಳಬೇಕೆಂದು ನಮ್ಮೆಲ್ಲರ ಅನಿಸಿಕೆ. ಬೆಕ್ಕಿಗೆ ಗಂಟೆ ಕಟ್ಟುವವರ‍್ಯಾರು?

ಪಂಡರಾಪುರದಿಂದ ಮಧ್ಯಾಹ್ನ 12 ಗಂಟೆಗೆ ಹೊರಟು ಸೋಲಾಪುರಕ್ಕಾಗಿ ರಾ.ಹೆ. 9ರಲ್ಲಿ ಸಾಗಿ ರಾತ್ರಿ 10.30ಕ್ಕೆ ಹೈದ್ರಾಬಾದ್-ಸಿಕಂದರಾಬಾದ್‌ಗೆ ದೀರ್ಘಪ್ರಯಾಣ ಕೈಗೊಂಡೆವು. ಸುಮಾರು 400ಕಿ.ಮೀ. ದೂರವನ್ನು ವಾಹನ ದಟ್ಟಣೆಯ ಹಾಗೂ ರಸ್ತೆ ರಿಪೇರಿಯಾಗುತ್ತಿರುವ ಮಾರ್ಗಗಳಲ್ಲಿ ಸಾಗುತ್ತಾ, ಅಲ್ಲಲ್ಲಿ ವಿರಮಿಸುತ್ತಾ, ಸಿಕಂದರಾಬಾದ್‌ನಲ್ಲಿ ನಮ್ಮ ಸ್ನೇಹಿತರ ಮನೆಯ ಜಾಗವನ್ನು ವಿಚಾರಿಸುತ್ತಾ ನಮ್ಮ ಗುರಿ ತಲಪಿದೆವು. ಮಂಜು-ಚಂದ್ರು ಸಂಸಾರ ನನ್ನ ತಮ್ಮನ ಕಡೆಯಿಂದ ಸಂಬಂಧಿಕರೂ ಹೌದು. ಮೂರು ರಾತ್ರಿಗಳ ನಮ್ಮ ವಾಸ್ತವ್ಯ ಅವರ ಅವಳಿ ಫ್ಲ್ಯಾಟ್ (ಕಟ್ಟಡದ 2ನೇ ಅಂತಸ್ತಿನ ಮನೆಗಳು)ನಲ್ಲಿ ಕಳೆದದ್ದು ಈಗ ಕನಸು. ಮನೆಯವರಂತೆ ನಮ್ಮನ್ನು ಆಧರಿಸಿ, ಸತ್ಕರಿಸುವ ಅವರ ರೀತಿಯನ್ನು ನಾವು ಮರೆಯಲಸಾಧ್ಯ. ಹೋದ ಮಾರನೇ ದಿನ (ದಶಂಬರ ಒಂದರಂದು) ಪ್ರಪಂಚದಲ್ಲೇ ಅದ್ಭುತವೆನಿಸಿದ ರಾಮೋಜಿ ಫಿಲ್ಮ್‌ಸಿಟಿ ವೀಕ್ಷಣೆ, ಸಂಜೆಗೆ ಗೋಲ್ಕೊಂಡಾದ ವಿಸ್ಮಯ ಶಬ್ದ ಮತ್ತು ಬೆಳಕಿನ (ಸೌಂಡ್ ಆ್ಯಂಡ್ ಲೈಟ್ ಶೋ) ಚಿತ್ರಣ ನೋಡಿ, ಆ ಬೃಹತ್ ಗೋಡೆಯ ನಿರ್ಮಾಣ ಹಾಗೂ ಅದರ ನಿರ್ನಾಮದ ಬಗ್ಗೆ ತಿಳಿದುಕೊಂಡೆವು. ತಾ.2 ರಂದು ಹೈದ್ರಾಬಾದ್‌ನಲ್ಲಿ ನೋಡುವಂತಹ ಪ್ರೇಕ್ಷಣೀಯ ಸ್ಥಳಗಳ (ಚಾರ್‌ಮಿನಾರ್. ಎನ್.ಟಿ. ರಾಮರಾಯರ ಸಮಾಧಿ ಮತ್ತು ಪಾರ್ಕ್ ಹಾಗೂ ಅದರಲ್ಲಿಯ ವಿಶೇಷತೆಗಳು (3ಡಿ ವೀಕ್ಷಣೆ / ಜಂಬೋ ಸವಾರಿ ಇತ್ಯಾದಿ) ಹುಸೇನ್ ಸಾಗರ್ ಮಧ್ಯದಲ್ಲಿರುವ ಬುದನ ವಿಗ್ರಹ, ಉಂಬಿಸ ಉದ್ಯಾವನ ಇತ್ಯಾದಿ ಕೌತುಕಗಳನ್ನು ವೀಕ್ಷಿಸಿ ಸಂತಸಪಟ್ಟೆವು ತಾ.3ರಂದು ಬೆಳಿಗ್ಗೆ ಸಿಕಂದರಾಬಾದ್ ಸಂಬಂಧಿಗಳಿಗೆ ಹಾರ್ದಿಕ ಕೃತಜ್ಞತೆ ಸಲ್ಲಿಸುತ್ತಾ ಅವರನ್ನು ನಮ್ಮೂರಿಗೆ ಆಹ್ವಾನಿಸಿದೆವು. ಅಲ್ಲಿಂದ ಶ್ರೀಶೈಲ ಮಲ್ಲಿಕಾರ್ಜುನ ಕ್ಷೇತ್ರಕ್ಕೆ ಪ್ರಯಾಣ ಬೆಳೆಸಿದೆವು.

ಸುಮಾರು 235ಕಿ.ಮೀ. ಪ್ರಯಾಣದಲ್ಲಿ ರಸ್ತೆ ಉತ್ತಮವಾಗಿರದಿದ್ದರೂ, ಪರ್ವತ ಕಾಡು-ಗುಡ್ಡೆ ಇರುವ ಪ್ರಕೃತಿ ಸೌಂದರ್ಯದ ದಾರಿಯಲ್ಲಿ ನಿಧಾನವಾಗಿ ಚಲಿಸಿ ಬೆಳಗ್ಗೆ 11-30ಕ್ಕೆ ಶ್ರೀಕ್ಷೇತ್ರ ತಲಪಿದೆವು. ಇಲ್ಲಿಯೂ ಪಂಡರಾಪುರದ ಅನುಭವವಾಯ್ತು. ಕಾರ್ತಿಕ ಸೋಮವಾರವಾದುದರಿಂದ ದ್ವಾದಶಲಿಂಗಗಳಲ್ಲೊಂದಾದ ಮಲ್ಲಿಕಾರ್ಜುನನನ್ನು ದರ್ಶನ ಗೈಯಲು ಅಸಾಧ್ಯ ನೂಕು-ನುಗ್ಗಲು. ಇಲ್ಲಿಯೂ ಸಾಕಷ್ಟು ಕಾಣಿಕೆಕೊಟ್ಟು ಏಜಂಟರ ಮುಖಾಂತರ ಹತ್ತಿರದ ದಾರಿ ಹಿಡಿಯ ಬೇಕಾಯ್ತು. ಸಮಯ-

(4ನೇ ಪುಟಕ್ಕೆ ...)


ಶ್ರೀಶಾರದಾ ದೇವಸ್ಥಾನದಲ್ಲಿ
ತಾ.09-08-2008ರ ಶನಿವಾರ
ಸಂಜೆ ಗಂಟೆ 5-30ರಿಂದ
**ಗಮಕವಾಚನ-ಪ್ರವಚನ**
ಕಾರ್ಯಕ್ರಮವು ನಡೆಯಲಿದೆ.
ವಾಚನ : ಭಾಗವತ, ಗಮಕಿ ನೀಲಾವರ **ಲಕ್ಷ್ಮೀನಾರಾಯಣರಾವ್**
ಪ್ರವಚನ : ಹವ್ಯಾಸಿ ತಾಳಮದ್ದಳೆ ಅರ್ಥಧಾರಿ, ನಾಟಕಕಾರ, ಪ್ರವಚನ'ಕಾರ **ಶ್ರೀ ಬಾರ್ಕೂರು ನಾಗೇಶರಾವ್.**
*ಸರ್ವರಿಗೂ ಆದರದ ಸ್ವಾಗತ*
**- ಶ್ರೀಶಾರದಾ ದೇವಸ್ಥಾನ ವೇದಿಕೆ**

**ಸಾಮೂಹಿಕ ಗಣಹೋಮ**
ಶ್ರೀಶಾರದಾ ದೇವಸ್ಥಾನದಲ್ಲಿ
ಪ್ರತಿ ತಿಂಗಳು
**ಸಂಕಷ್ಟಹರ ಚತುರ್ಥಿಯಂದು**
ನಡೆಯುತಿರುವ
**ಸಾಮೂಹಿಕ ಗಣಹೋಮವು**
ತಾ.21-07-2008ರಂದು ಮತ್ತು
ಆಗಸ್ಟ್ ತಿಂಗಳಲ್ಲಿ
20-08-2008ರಂದು ನಡೆಯಲಿದೆ.
**ಗಣಹೋಮ ಸೇವಾ ಶುಲ್ಕ ರೂ.51/-**
ಗಣಹೋಮ ಸೇವೆ ನೀಡಲು
ಇಚ್ಛಿಸುವವರು ಶಾರದಾ ಮಂಟಪದ
ಮೆನೇಜರ್‌ರವರನ್ನು ಸಂಪರ್ಕಿಸಲು
ಕೋರಲಾಗಿದೆ.
**- ಶ್ರೀಶಾರದಾ ದೇವಸ್ಥಾನ ವೇದಿಕೆ**